# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 235 | Pages. 2 | Date: 30-07-2025, WEDNESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 235 - ಪುಟಗಳು : 2 - 30 ಜುಲೈ 2025 ಬುಧವಾರ Ph: 8762954248 ದರ : ₹1


# ರಸ್ತೆ ಅಪಘಾತ ನಿಯಂತ್ರಣಕ್ಕೆ ಡಿಸಿ ಸೂಚನೆ

## ಆರು ತಿಂಗಳಲ್ಲಿ 451 ಜನರ ಸಾವು | ರಸ್ತೆ ಸುರಕ್ಷತಾ ಸಭೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ರಸ್ತೆ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ರಸ್ತೆ ನಿಯಮ ಪಾಲಿಸುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಸ್ತೆ ಸುರಕ್ಷತಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನ್ಯೂನ್ಯತೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಸರಿಪಡಿಸುವ ಮೂಲಕ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು. ದ್ವಿಚಕ್ರ ವಾಹನ ಚಾಲನೆಯಿಂದ ಅಪಘಾತಗಳು ಸಂಭವಿಸಿ, ಹೆಚ್ಚು ಜನರು ಮೃತಪಟ್ಟಿರುತ್ತಾರೆ. ಅದನ್ನುತಡೆಗಟ್ಟಲು ದ್ವಿಚಕ್ರ ವಾಹನ ಚಾಲನೆ ಮಾಡುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ನಾಲ್ಕು ಚಕ್ರದ ವಾಹನದಲ್ಲಿ ಮುಂದಿನ ಹಾಗೂ ಹಿಂದಿನ ಸೀಟುಗಳಲ್ಲಿ ಕುಳಿತುಕೊಳ್ಳುವವರು ಪ್ರಾಣ ರಕ್ಷಣೆಗಾಗಿ ಕಡ್ಡಾಯವಾಗಿ ಸೀಟ್ ಬೇಲ್ಟ್ ಹಾಕುವಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದರು.

ಕಳೆದ ಆರು ತಿಂಗಳಲ್ಲಿ ಅಪಘಾತಗಳಿಂದ ಜಿಲ್ಲೆಯ ನಗರ ವ್ಯಾಪ್ತಿಯಲ್ಲಿ 281 ಹಾಗೂ ಗ್ರಾಮೀಣ ಪ್ರದೇಶದಲ್ಲಿ 170 ಜನರು ಮೃತಪಟ್ಟಿದ್ದಾರೆ. ಅದನ್ನು ಗಂಭೀರವಾಗಿ ಪರಿಗಣಿಸಿ ಅಪಘಾತಗಳು ಸಂಭವಿಸದಂತೆ ತಡೆಗಟ್ಟಲು ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದರು.

ವಾಹನಗಳ ಚಲಾಯಿಸುವ ಬಗ್ಗೆ ಪ್ರತಿಯೊಬ್ಬರಿಗೂ ಶಿಕ್ಷಣದ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಂಚಾರಿ ನಿಯಮಗಳ ಕುರಿತು ಕಲಾ ತಂಡಗಳಿಂದ ಬೀದಿ ನಾಟಕದ ಮೂಲಕ ಜಾಗೃತಿ ಮೂಡಿಸಲು ಸೂಚಿಸಿದರಲ್ಲದೆ, ಪದವಿ ಪೂರ್ವ ಕಾಲೇಜುಗಳಲ್ಲಿ ರಸಪ್ರಶ್ನೆ ಕಾರ್ಯಕ್ರಮ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.



### ತರಬೇತಿ ಆಯೋಜಿಸಿ

ಕುಡಿದು ವಾಹನ ಚಲಾಯಿಸುವುದು, ವೇಗವಾಗಿ ವಾಹನ ಚಲಾಯಿಸುವುದು, ಸಂಚಾರಿ ನಿಯಮಗಳ ಉಲ್ಲಂಘನೆ ಮಾಡಿ ವಾಹನ ಚಲಾಯಿಸುವುದರಿಂದ ಅಪಘಾತಗಳು ಸಂಭವಿಸುತ್ತಿವೆ. ಈ ನಿಟ್ಟಿನಲ್ಲಿ ವೃತ್ತಿ ನಿರತ ವಾಹನ ಚಾಲಕರಿಗೆ ಓರಿಯೆಂಟೇಶನ್ ತರಬೇತಿ, ರಿಫ್ರೇಶ್ ಮೆಂಟ್‌ಕೋರ್ಸ್ ಆಯೋಜಿಸಬೇಕು. ಸಂಚಾರಿ ನಿಯಮಗಳ ಬಗ್ಗೆ ಅರಿವು ಮೂಡಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಪ್ರತಿ ತಿಂಗಳ ಎರಡನೇ ಮಂಗಳವಾರ ಸಂಜೆ 6 ಗಂಟೆಗೆ ರಸ್ತೆ ಸುರಕ್ಷಾತಾ ಸಮಿತಿಯ ವರ್ಚುಲ್ ಸಭೆ ಹಾಗೂ 4ನೇ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಬೌದ್ಧಿಕ ಸಭೆ ನಡೆಸಲಾಗುವುದು. ತಾಲ್ಲೂಕು ಮಟ್ಟದಲ್ಲಿಯೂ ಕಡ್ಡಾಯವಾಗಿ ತಹಶೀಲ್ದಾರ್‌ಗಳು ರಸ್ತೆ ಸುರಕ್ಷಾತಾ ಸಮಿತಿ ಸಭೆ ನಡೆಸಿ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು.

ಸಭೆಗೆ ಕಡ್ಡಾಯವಾಗಿ ಆಟೋ ಚಾಲಕರ ಸಂಘ, ಟ್ರಕ್, ಕ್ಯಾಬ್, ಟ್ಯಾಕ್ಸಿ, ಗೂಡ್ಸ್ ವಾಹನದ ಚಾಲಕರ ಸಂಘ ಪದಾಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಯ ಪದಾಧಿಕಾರಿಗಳನ್ನು ಸಭೆಗೆ ಆಹ್ವಾನಿಸುವಂತೆ ನಿರ್ದೇಶನ ನೀಡಿದರು.

ಲಿಕ್ಕರ್ ಶಾಪ್‌ಗಳಿಗೆ ಪರವಾನಿಗೆ ಕೊಡುವಾಗ ರಸ್ತೆ ಸುರಕ್ಷತೆಯನ್ನು ಸಹ ಪರಿಗಣಿಸಬೇಕು.

ನಗರದಲ್ಲಿ ಶಿಸ್ತುಬದ್ಧ ಪಾರ್ಕಿಂಗ್ ವ್ಯವಸ್ಥೆಗೆಕ್ರಮವಹಿಸುವುದುಜೊತೆಗೆ ಖಾಸಗಿ ವಾಹನಗಳನ್ನು ತಮ್ಮ ಸ್ವಂತ ಸ್ಥಳಗಳಲ್ಲಿ ನಿಲ್ಲಿಸಲು ಕ್ರಮ ವಹಿಸಬೇಕು.ಯುವ ಜನತೆ ನಿರ್ಲಕ್ಷ್ಯದಿಂದ ವಾಹನ ಚಲಾವಣೆ ಮಾಡುವುದರಿಂದ ಅಪಘಾತಗಳು ಸಂಭವಿಸುತ್ತಿರುವುದು ಕಂಡುಬರುತ್ತಿದೆ. ಅವರಿಗೆ ಜಾಗೃತಿ ಮೂಡಿಸುವುದುಅಗತ್ಯವಿದೆ ಎಂದರು.

### ಆಸ್ಪತ್ರೆಗಳು ಸುಸ್ಥಿತಿಯಲ್ಲಿರಲಿ

ಅಪಘಾತಗಳು ಸಂಭವಿಸಿದಾಗ ಗೋಲ್ಡನ್ ಹವರ್‌ನಲ್ಲಿ ಪ್ರಾಣ ಉಳಿಸಲು ಆಸ್ಪತ್ರೆಗಳಲ್ಲಿ ತುರ್ತು ವೈದ್ಯಕೀಯ ಸೇವೆ ಒದಗಿಸಲು ಆಸ್ಪತ್ರೆಗಳನ್ನು ನೋಟಿಫೈ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು. ಅಂಬುಲೆನ್ಸ್‌ಗಳು ಬಳಕೆಗೆ ಯೋಗ್ಯವಾಗಿವೆಯೇ ಎಂದು ಪರಿಶೀಲಿಸುವಂತೆ ಸೂಚಿಸಿದರಲ್ಲದೆ, ರಾಷ್ಟ್ರೀಯ ಹೆದ್ದಾರಿಯ ಸಹಾಯವಾಣಿ ಸಂಖ್ಯೆ 1033ಗೂ ಕರೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಅಪಘಾತಗಳನ್ನು ನಿಯಂತ್ರಿಸಲು ರಸ್ತೆ ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಎಲ್ಲಾ ವಾಹನಗಳಿಗೆ ಕಡ್ಡಾಯವಾಗಿ ರೇಡಿಯನ್ ಸ್ಟ್ರಿಪ್ ಅಳವಡಿಸಬೇಕು. ನಾಯಿಗಳು ವಾಹನಗಳಿಗೆ ಅಡ್ಡ ಬರುವುದರಿಂದಲೂ ಅಪಘಾತ ಸಂಭವಿಸುವುದರಿಂದ ನಾಯಿಗಳ ಜನನ ನಿಯಂತ್ರಣಕ್ಕೆ ಸ್ಥಳೀಯ ಸಂಸ್ಥೆಗಳು ಅಗತ್ಯಕ್ರಮ ತೆಗೆದುಕೊಳ್ಳಬೇಕು ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಗಿರೀಶ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಕಾಶ್‌ಮತ್ತಿತರರಿದ್ದರು.

# ಜಿಲ್ಲಾದ್ಯಂತ ನಾಗರ ಪಂಚಮಿ ಸಂಭ್ರಮ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರ ಸೇರಿ ಜಿಲ್ಲಾದ್ಯಂತ ಮಂಗಳವಾರ ನಾಗರ ಪಂಚಮಿಯನ್ನು ಸಾರ್ವಜನಿಕರು ಅರ್ಥಪೂರ್ಣವಾಗಿ ಆಚರಿಸಿದರು.

ನಗರದ ಮಹಾರಾಜ ಪಾರ್ಕ್, ಹೇಮಾವತಿ ನಗರದ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ ಸೇರಿ ವಿವಿಧೆಡೆ ಹುತ್ತಕ್ಕೆ ಹಾಲೆರೆದು ಭಕ್ತಿ ಮೆರೆದರು. ಶ್ರಾವಣ ಮಾಸದ ಮೊದಲ ಹಬ್ಬ ನಾಗರ ಪಂಚಮಿ. ಈ ಹಬ್ಬ ಮುಂದೆ ಬರಲಿರುವ ಗಣೇಶ ಚತುರ್ಥಿ, ಕೃಷ್ಣಾಷ್ಟಮಿ, ನವರಾತ್ರಿ, ಊರಿನ ಜಾತ್ರೆಗೆ ಮುನ್ನುಡಿಯಾಗಿದೆ. ನಾಗರ ಪಂಚಮಿ ದಿನ ಹುತ್ತಕ್ಕೆ ಶಾಸ್ತ್ರೋಕ್ತವಾಗಿ ಪೂಜೆ ಮಾಡಿದರೆ ಇಷ್ಟಾರ್ಥಗಳು ನೆರವೇರುತ್ತದೆಂಬುದು ನಂಬಿಕೆಯಾಗಿದೆ. ದೇವಾಲಯಗಳಲ್ಲಿ ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

# ಅಪಘಾತದಲ್ಲಿ ಬೈಕ್ ಸವಾರ ಸಾವು

ಚನ್ನರಾಯಪಟ್ಟಣ: ಕ್ಯಾಂಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ರಾಷ್ಟ್ರೀಯ ಹೆದ್ದಾರಿ 75ರ ಜೋಗಿಪುರ ಸಮೀಪ ನಡೆದಿದೆ.

ತಾಲ್ಲೂಕಿನ ಗೌಡಗೆರೆ ಗ್ರಾಮದ ಜಿ.ಎಸ್. ಮಧು (35) ಮೃತರು. ಜು. 27ರ ರಾತ್ರಿ 9ರ ಸಮಯದಲ್ಲಿ ಜೋಗಿಪುರ ಹತ್ತಿರ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಕ್ಯಾಂಟರ್ ಡಿಕ್ಕಿಯಾಗಿದೆ. ವಾಹನದ ಚಕ್ರ ತಲೆ ಮೇಲೆ ಹರಿದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕರೀಂ ಖಾನ್ ಜಾನಪದ ಲೋಕದ ಅನನ್ಯ ಪ್ರತಿಭೆ

## ರಂಗಕರ್ಮಿ ರಕ್ಷಿದಿ ಪ್ರಸಾದ್ ಅಭಿಮತ | ಜನಪದ ಜಂಗಮನಿಗೆ ನುಡಿ ನಮನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಡಾ. ಎಸ್.ಕೆ. ಕರೀಂ ಖಾನ್ ಅವರು ಗ್ರಾಮೀಣ ಬದುಕು, ಕಲೆ ಮತ್ತು ಸಂಸ್ಕೃತಿ ಅಧ್ಯಯನಕ್ಕಾಗಿ ಜೀವವನ್ನೇ ಮುಡಿಪಾಗಿಟ್ಟಿದ್ದರು ಎಂದು ರಂಗಕರ್ಮಿ ಪ್ರಸಾದ್ ರಕ್ಷಿದಿ ತಿಳಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಮಂಗಳವಾರ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಜನಪದ ಜಂಗಮು' ಡಾ. ಎಸ್.ಕೆ. ಕರೀಂ ಖಾನ್ ಅವರ 19ನೇ ವರ್ಷದ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿ, ಕರೀಂ ಖಾನ್ ಕನ್ನಡ ಜಾನಪದ ಲೋಕದ ಅನನ್ಯ ಪ್ರತಿಭೆ. ಜಾನಪದವು ಅವರ ಹೃದಯದ ನಾಡಿಯಾಗಿತ್ತು. ಮಹಾತ್ಮ ಗಾಂಧೀಜಿ ಅವರ ಚಿಂತನೆಗಳನ್ನು ಅಳವಡಿಸಿಕೊಂಡಿದ್ದ ಅವರು ಗ್ರಾಮೀಣ ಸಂಸ್ಕೃತಿಯ ಅಧ್ಯಯನಕ್ಕಾಗಿ ಇಡೀ ಜೀವನ ಮೀಸಲಿಟ್ಟಿದ್ದರು ಎಂದರು.

ಸುಮಾರು 8 ಸಾವಿರ ಕಿ.ಮೀ. ಬಸ್‌ನಲ್ಲಿ ಸಂಚರಿಸಿ 240 ಗಂಟೆಗಳ ಜಾನಪದ ಕಲಾ ವೀಡಿಯೋ ದಾಖಲೆ



ಮಾಡಿದರು. ಜಾನಪದ ಗೀತೆಗಳ ರಚನೆ, ಸಂಗ್ರಹ, ಅಧ್ಯಯನ ಮತ್ತು ಪ್ರಸಾರದಲ್ಲಿ ಅತ್ಯುನ್ನತ ಸೇವೆ ಸಲ್ಲಿಸಿದ್ದಾರೆ. ಅವರ ಕೃಷಿ, ಗಿರಿಜನ ಕಲೆಯ ಪ್ರೋತ್ಸಾಹ, ಜನಪದ ಲೋಕದ ವೈಶಿಷ್ಟ್ಯತೆಗಳ ಕುರಿತ ಸಂಶೋಧನೆಗಳು ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಚರ್ಚೆಗೂ ದಿಕ್ಕು ತೋರಿದವು. ಜನಪದ ಗೀತೆ ಮತ್ತು ಕನ್ನಡ ಜನಪದ ಗೀತೆಗಳು ಎಂಬ ಎರಡು ಪ್ರಮುಖ ಸಂಕಲನಗಳನ್ನು ಕನ್ನಡಿಗರಿಗೆ ನೀಡಿದ್ದಾರೆ. ಅವರ ರಚನೆಗಳಲ್ಲಿ ನಾಟಕ, ಕಥಾ ಸಂಕಲನ, ಕಾದಂಬರಿ, ಭಕ್ತಿಗೀತೆ, ಚಿತ್ರಗೀತೆಗಳು ಸೇರಿವೆ ಎಂದರು.

ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್ ಮಾತನಾಡಿ, ಎಸ್.ಕೆ. ಕರೀಂ ಖಾನ್ ಆದರ್ಶದ ಜೀವನ ಎಲ್ಲರಿಗೂ ಮಾದರಿ ನಮ್ಮೂರ ಹೆಸರಿಗೆ ಕೀರ್ತಿ ತಂದವರು ಎಂದರು.

ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳನ್ನು ಡ್ರಗ್ಸ್ ಪಿಡುಗು ನಾಶಮಾಡಲು ಮುಂದಾಗಿದೆ. ಅದರ ವಿರುದ್ಧ ಹೋರಾಡಲು ನಾವೆಲ್ಲ ಒಂದಾಗಬೇಕಾಗಿದೆ. ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದಲ್ಲಿ ಪ್ರಮುಖ ಪಾತ್ರವನ್ನು ವಿದ್ಯಾರ್ಥಿನಿಯರು ವಹಿಸಬೇಕಾಗಿದೆ ಎಂದು ಕರೆ ನೀಡಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಶಾರದಾ ಗುರುಮೂರ್ತಿ ಮಾತನಾಡಿ, 1989ರಲ್ಲಿ ಕಲಬುರಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, 1995ರಲ್ಲಿ ಜಾನಪದ ಶ್ರೀ, 1997ರಲ್ಲಿ ನಾಡೋಜ, 2004ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸೇರಿ ನೂರಕ್ಕೂ



ಹೆಚ್ಚು ಗೌರವಕ್ಕೆ ಪಾತ್ರರಾದ ಕರೀಂ ಖಾನ್ ನಮ್ಮ ತಾಲ್ಲೂಕಿನವರು ಎನ್ನುವುದು ಹೆಮ್ಮೆಯ ವಿಚಾರ. ಅವರ ಸಾಧನೆಯ ಪ್ರತೀಕವೆಂಬಂತೆ ಬೆಂಗಳೂರು ಇಂದಿರಾ ನಗರದ 100 ಅಡಿ ರಸ್ತೆಗೆ ಎಸ್.ಕೆ. ಕರೀಂ ಖಾನ್ ರಸ್ತೆ ಎಂಬ ನಾಮಕರಣವೂ ಮಾಡಲಾಗಿದೆ ಎಂದರು.

ಪ್ರಾಂಶುಪಾಲ ವಿ.ಪಿ. ರಮೇಶ್ ಉದ್ಘಾಟಿಸಿದರು. ಪತ್ರಕರ್ತ ಮಲ್ನಾಡ್ ಮೆಹಬೂಬ್, ಅರ್ಚನಾ ಜಯಂತ್, ಕಸಾಪ ತಾಲ್ಲೂಕು ಕಾರ್ಯದರ್ಶಿ ಯೋಗೇಶ್, ಎಸ್.ಡಿ. ಆದರ್ಶ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೈಭೀಮ್ ಮಂಜುನಾಥ್, ಚೇತನ್, ಅಕ್ಬರ್ ಜುನೈದ್, ಪುರಸಭೆ ನಾಮನಿರ್ದೇಶಿತ ಸದಸ್ಯ ಬಿಲ್ಕಸ್ ರಾಣಿ, ಸಾಯಿಬಾಬಾ ಇತರರಿದ್ದರು.

# ವಿದ್ಯಾರ್ಥಿಗಳು ಸಂಸ್ಕಾರ ಕಲಿತು ಒಳ್ಳೆಯ ಪ್ರಜೆಗಳಾಗಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿದ್ಯಾರ್ಥಿಗಳು ಸಂಸ್ಕಾರವಂತರಾಗಿ ಹೆತ್ತ ತಂದೆ-ತಾಯಿಯ ಋಣ ತೀರಿಸಬೇಕು ಎಂದು ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಆಯುಕ್ತ ಡಾ. ವೈ.ಎಸ್. ವೀರಭದ್ರಪ್ಪ ಹೇಳಿದರು.

ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕಿನ ವಿವಿಧ ಕಾಲೇಜುಗಳ ರೋವರ್ಸ್ ಮತ್ತು ರೇಂಜರ್ಸ್, ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಅಗ್ರಗಾಮಿ ಪ್ರಾವೀಣ್ಯತಾ ಪದಕ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳು ಸಂಸ್ಕಾರವಂತರಾಗಿ ಗುರುಗಳ ಹಾಗೂ ತಂದೆ-ತಾಯಿ ಮತ್ತು ಸಮಾಜದ ಋಣ ತೀರಿಸಬೇಕಿದೆ. ವಿದ್ಯಾಭ್ಯಾಸದ ಜೊತೆಗೆ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿದರೆ ಸದೃಢ ರಾಷ್ಟ್ರ ನಿರ್ಮಾಣವಾಗುತ್ತದೆ ಎಂದರು.

ತರಬೇತಿ ಕಾರ್ಯಕ್ರಮದ ಸಂಯೋಜಕಿ ಬಿ.ಎಸ್. ವನಜಾಕ್ಷಿ ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯು ವಿದ್ಯಾರ್ಥಿಯ ಮೂಲ ಶಿಕ್ಷಣದಿಂದ ವೃತ್ತಿಪರ ಶಿಕ್ಷಣದವರೆಗೂ ಸೇರಿ ಎಲ್ಲಾ ಚಟುವಟಿಕೆಗಳಿಗೆ ಮಾರ್ಗದರ್ಶಕ ಕ್ರಿಯಾ ರೂಪದಂತಿರುತ್ತದೆ. ಈ ಪಯಣದಲ್ಲಿ ಯಾವ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುತ್ತಾರೋ ಅವರಿಗೆ ವೃತ್ತಿ ಮತ್ತು ಪ್ರವೃತ್ತಿ, ವೈಯಕ್ತಿಕ ಬದುಕಿಗೆ, ಮಾರ್ಗದರ್ಶನದ ಕೈಗನ್ನಡಿಯಂತಿರುತ್ತದೆ



ಎಂದು ತಿಳಿಸಿದರು.

ಗೈಡ್ಸ್ ಆಯುಕ್ತ ಜಯರಮೇಶ್ ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ ಎಂದರು.

ವಿವಿಧ ಶಾಲೆಗಳಿಂದ ಆಗಮಿಸಿದ್ದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಏಕಲವ್ಯ ಮುಕ್ತ ದಳದ ಸಹ ನಾಯಕ ಗಿರೀಶ್, ಕುಮಾರಸ್ವಾಮಿ, ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ಯಾರ್ಥಿಗಳಿಗೆ ಗೃಹ ಉಪಯೋಗಿ ಉಪಕರಣ ತಯಾರಿಕೆ ಧ್ವಜ ಸಂಬಂಧ ಮತ್ತು ಸೇತುವೆ, ಗ್ಯಾಜೆಟ್ ನಿರ್ಮಾಣ ಕುರಿತು ತರಬೇತಿ ನೀಡಿದರು.

ಸ್ಕೌಟ್ಸ್ ಅಂಡ್ ಗೈಡ್ಸ್ ಖಜಾಂಚಿ ಮಹಾಲಿಂಗೇಗೌಡ, ಪ್ರಿಯಾಂಕ, ನಿಕಟ ಪೂರ್ವ ಜಿಲ್ಲಾ ಜಂಟಿ ಕಾರ್ಯದರ್ಶಿ ಹೆಚ್.ಜಿ. ಕಾಂಚನಮಾಲ ಮತ್ತಿತರರಿದ್ದರು.

# ಹುತ್ತದ ಬದಲು ಮಕ್ಕಳಿಗೆ ಹಾಲು ನೀಡಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ನಾಗರ ಪಂಚಮಿ ಹೆಸರಿನಲ್ಲಿ ಹಾವಿನ ಹುತ್ತಕ್ಕೆ ಹಾಲೆರೆದು ಹಾಳು ಮಾಡುವ ಬದಲು ಅಪೌಷ್ಟಿಕತೆಯಿಂದ ಬಳಲುವ ಮಕ್ಕಳಿಗೆ ನೀಡಿದರೆ ಅನುಕೂಲವಾಗುತ್ತದೆ ಎಂದು ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಜಯಲಕ್ಷ್ಮೀ ಹೇಳಿದರು.

ಮಾನವ ಬಂಧುತ್ವ ವೇದಿಕೆ ತಾಲ್ಲೂಕು ಘಟಕದಿಂದ ಮಂಗಳವಾರ ಬಸವ ಪಂಚಮಿ ಅಂಗವಾಗಿ ಹಮ್ಮಿಕೊಂಡಿದ್ದ ರೋಗಿಗಳಿಗೆ ಹಾಲು-ಬ್ರೆಡ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಾನವ ಬಂಧುತ್ವ ವೇದಿಕೆಯಿಂದ ರೋಗಿಗಳಿಗೆ ಹಾಲು, ಬ್ರೆಡ್ ವಿತರಿಸಿ ನಾಗರ ಪಂಚಮಿಯನ್ನು ಬಸವ ಪಂಚಮಿಯನ್ನಾಗಿ ಆಚರಿಸುತ್ತಿರುವುದು ಉತ್ತಮ ಬೆಳವಣಿಗೆ. ಹಾವುಗಳು ಹಾಲು ಕುಡಿಯುವುದಿಲ್ಲ. ಆದರೂ ಹಾಲನ್ನು ಹುತ್ತಕ್ಕೆ ಎರೆದು ಹಾಳು ಮಾಡುತ್ತಿದ್ದೇವೆ. ದೇಶದಲ್ಲಿ ಸಾಕಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಹಾಲಿನಲ್ಲಿ ಕಾರ್ಬೋಹೈಡೆಟ್, ಪ್ರೋಟೀನ್ ಸೇರಿ ಮಕ್ಕಳಿಗೆ ಬೇಕಾದ ಪೂರಕ ಪದಾರ್ಥವಿದೆ. ಹಾಲನ್ನು ವ್ಯರ್ಥ ಮಾಡದೆ ಒಳ್ಳೆಯ ಉದ್ದೇಶಕ್ಕೆ ಬಳಸಿದರೆ ಸಾರ್ಥಕವಾಗುತ್ತದೆ. ಇಂತಹ ಕಾರ್ಯಕ್ರಮಗಳು ಮೂಢ ನಂಬಿಕೆಯನ್ನು ಹೋಗಲಾಡಿಸಲು ನೆರವಾಗುತ್ತದೆ ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ವಿಜಯ್ ಮಾತನಾಡಿ, ದೇಶದಲ್ಲಿ ಹೆಚ್ಚು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಪ್ರಮುಖವಾಗಿ ಮಗು ಹುಟ್ಟಿದಾಗ ತಾಯಿಯ ಹಾಲು ಮಗುವಿಗೆ ಅಮೃತವಿದ್ದಂತೆ. ಆರು ತಿಂಗಳವರೆಗೆ ನಿರಂತರವಾಗಿ ಹಾಲು ಕುಡಿಸಬೇಕು. ಅದೇ ರೀತಿ ನಾವು ನಾಗರ ಪಂಚಮಿ ಹೆಸರಲ್ಲಿ ಹಾಲನ್ನು ಹಾಳು ಮಾಡದೆ ಅವಶ್ಯಕತೆ ಇರುವ ಮಕ್ಕಳಿಗೆ ಕೊಟ್ಟರೆ ನಿಜವಾದ ಅರ್ಥ ಬರುತ್ತದೆ. ವೈಜ್ಞಾನಿಕವಾಗಿ ಹಾವು ಹಾಲು ಕುಡಿಯುವುದಿಲ್ಲ ಎಂಬುದು ಸಾಬೀತಾಗಿದ್ದರೂ, ನಾಗರ ಪಂಚಮಿ ಹೆಸರಿನಲ್ಲಿ ಸಾವಿರಾರು ಲೀಟರ್ ಹಾಲನ್ನು ಹುತ್ತಕ್ಕೆ ಹಾಕುತ್ತೇವೆ. ಅದೇ ಹಾಲನ್ನು ಮಕ್ಕಳ ಜೊತೆ ಹಂಚಿಕೊಂಡರೆ ಒಳ್ಳೆಯದು ಎಂದರು.

ದಸಂಸ ವಿಭಾಗೀಯ ಸಂಚಾಲಕ ಲಕ್ಷ್ಮಣ್ ಬೇಲೂರು, ಮಾನವ ಬಂಧುತ್ವ ವೇದಿಕೆ ಸಂಪನ್ಮೂಲ ವ್ಯಕ್ತಿ ಸೌಭಾಗ್ಯ ಅಂತೋಣಿ ಸ್ವಾಮಿ, ವಿದ್ಯಾರ್ಥಿ ವೇದಿಕೆ ತಾಲ್ಲೂಕು ಸಂಚಾಲಕ ರಂಜನ್, ಮಂಜುನಾಥ್, ಸಂಜಯ್, ಶಿವಕುಮಾರ್, ಉಮೇಶ್, ಚಂದ್ರು, ಕುಮಾರ್, ನೂರ್‌ಅಹಮದ್, ರಮೇಶ್, ಶೇಷಪ್ಪ ಮತ್ತಿತರರಿದ್ದರು.

# ವಾಹನ ಚಾಲಕನ ಕೊಲೆ ಅಪರಾಧಿಗೆ ಜೀವಾವಧಿ ಶಿಕ್ಷೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗೂಡ್ಸ್ ವಾಹನದ ಬಾಡಿಗೆ ವಿಚಾರವಾಗಿ ನಡೆದ ಗಲಾಟೆಯಲ್ಲಿ ಜಾಕ್ ರಾಡ್‌ನಿಂದ ಚಾಲಕನನ್ನು ಹೊಡೆದು ಕೊಲೆಗೈದಿದ್ದ ಅಪರಾಧಿಗೆ ಜೀವಾವಧಿ ಶಿಕ್ಷೆ ಹಾಗೂ 4 ಲಕ್ಷ ರೂ. ದಂಡ ವಿಧಿಸಿ ಜಿಲ್ಲಾ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದ ಯಡಿಯೂರಪ್ಪ ಎಂಬುವವರನ್ನು 2021ರ ಆ. 26ರಂದು ಅದೇ ಗ್ರಾಮದ ಪ್ರಸನ್ನ ಎಂಬಾತ ಕೊಲೆ ಮಾಡಿದ್ದ.

ಯಡಿಯೂರಪ್ಪ ಮತ್ತು ಪ್ರಸನ್ನ ಗೂಡ್ಸ್ ವಾಹನ ಓಡಿಸಿಕೊಂಡಿದ್ದರು. 2021ರ ಜುಲೈನಲ್ಲಿ ಬಾಡಿಗೆ ಹೋಗುವ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ನಡೆದಿತ್ತು. ಯಡಿಯೂರಪ್ಪ ತನಗೆ ಬಾಡಿಗೆ ಬಿಡದೆ ಕಡಿಮೆ ಹಣ ಪಡೆದು ಬಾಡಿಗೆ ಮಾಡುತ್ತಾನೆ. ಅದರಿಂದ ತನಗೆ ಬಾಡಿಗೆ ಸಿಗುತ್ತಿಲ್ಲವೆಂದು ಪ್ರಸನ್ನ ದ್ವೇಷಕಾರುತ್ತಿದ್ದ. ಅದೇ ಆಕ್ರೋಶದಲ್ಲಿ ಆತನ ಕೊಲೆಗೆ ಸಂಚು ರೂಪಿಸಿದ್ದ. ಆ. 26 ರಂದು ರಾಮನಾಥಪುರ ರಸ್ತೆಯಲ್ಲಿರುವ ಮಲ್ಲಾಪುರ ಗ್ರಾಮದಿಂದ ಆಲೂಗೆಡ್ಡೆ ತುಂಬಿಕೊಂಡು ಬರುವ ಬಾಡಿಗೆಯಿದೆ ಎಂದು ಸುಳ್ಳು ಹೇಳಿ ಯಡಿಯೂರಪ್ಪನನ್ನು ಮೊದಲೇ ಮಲ್ಲಾಪುರ ಗ್ರಾಮಕ್ಕೆ ಕಳುಹಿಸಿ ನಂತರ ತನ್ನ ವಾಹನದಲ್ಲಿ ತೆರಳಿದ್ದ. ಅಲ್ಲಿಂದ ಲಕ್ಕೂರು-ಸೋಂಪುರ ಅರಣ್ಯಕ್ಕೆ ಹೋಗುವ ಮಣ್ಣು ರಸ್ತೆಯಲ್ಲಿ ನಿಲ್ಲಿಸಿ ಗಲಾಟೆ ಶುರು ಮಾಡಿದ್ದ. ಎಲ್ಲಾ ಬಾಡಿಗೆ ನೀನೇ ಹೋಗುತ್ತಿಯಾ, ನಿನ್ನಿಂದ ನನ್ನ ದುಡಿಮೆಗೆ ಕುತ್ತು ಬಂದಿದೆಯೆಂದು ಆಕ್ರೋಶದಿಂದ ಜಾಕ್ ರಾಡ್‌ನಿಂದ ತಲೆ ಹಾಗು ಹಣೆಗೆ ಬಲವಾಗಿ ಹೊಡೆದು ನಂತರ ನೆಲದ ಮೇಲೆ ಮಕಾಡೆಯಾಗಿ ಬಿದ್ದಾಗ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಕೊಣನೂರು ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ಎ. ಹಿದಾಯತ್ ಉಲ್ಲಾ ಷರೀಫ್ ಅವರು, ಅಪರಾಧಿ ಪ್ರಸನ್ನಗೆ ಜೀವಾವಧಿ ಶಿಕ್ಷೆ, ಮೃತನ ಪತ್ನಿಗೆ ಪರಿಹಾರವಾಗಿ 4 ಲಕ್ಷ ರೂ. ನೀಡಲು ಆದೇಶಿಸಿದರು. ಸರ್ಕಾರದ ಪರವಾಗಿ ಕೆ.ಎಸ್. ನಾಗೇಂದ್ರ ವಾದ ಮಂಡಿಸಿದರು.


ಕನ್ನಡ ಪೋಸ್ಟ್

ಕನ್ನಡ ದಿನಪತ್ರಿಕೆಗೆ

ವರದಿಗಾರರು ಬೇಕಾಗಿದ್ದಾರೆ

kannadapost.in

ಕನ್ನಡ ಪೋಸ್ಟ್ ಡಿಜಿಟಲ್

ಹಾಸನ ಜಿಲ್ಲೆಯ ತಾಲ್ಲೂಕು ಕೇಂದ್ರ, ಪ್ರಮುಖ ಹೋಬಳಿ ಕೇಂದ್ರಗಳಿಗೆ ನವ ಮಾಧ್ಯಮದ ವೇಗಕ್ಕೆ ತಕ್ಕಂತೆ ಕೆಲಸ ಮಾಡುವ ಉತ್ಸಾಹಿ ವರದಿಗಾರರು ಬೇಕಾಗಿದ್ದಾರೆ.

ಆಸಕ್ತರು ಸಂಪರ್ಕಿಸಿ

ಪ್ರತಾಪ್ ಹಿರೀಸಾವೆ, ಮೊ.ಸಂ. 9481136478

# ರೋಗಿಗಳಿಗೆ ಅಗತ್ಯ ಚಿಕಿತ್ಸೆ ಒದಗಿಸಲು ಡಿ.ಸಿ. ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಸಾರ್ವಜನಿಕ ಆಸ್ಪತ್ರೆಗೆ ಬರುವ ರೋಗಿಗಳಿಗೆ ಅಗತ್ಯ ಚಿಕಿತ್ಸೆ ಒದಗಿಸುವುದರ ಜೊತೆಗೆ ಔಷಧಿಗಳ ವಿತರಣೆಗೆ ಕ್ರಮವಹಿಸಿ, ಔಷಧಿಗಳಿಗೆ ಹೊರಗೆ ತೆಗೆದುಕೊಳ್ಳಿ ಎಂದು ಚೀಟಿ ಬರೆದುಕೊಡದಂತೆ ನಿಗಾವಹಿಸಿ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಕ್ತ ಪರೀಕ್ಷೆ ಮಾಡಿದ ಸಂದರ್ಭದಲ್ಲಿ ವಿಳಂಬವಾಗದಂತೆ ಶೀಘ್ರವಾಗಿ ವರದಿಯನ್ನು ರೋಗಿಗಳಿಗೆ ಒದಗಿಸಿ ಅಗತ್ಯ ಚಿಕಿತ್ಸೆ ಪಡೆಯಲು ಅನುವು ಮಾಡಿಕೊಬೇಕು ಎಂದರು.

ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಏಪ್ರಾನ್ ಧರಿಸುವಂತೆ ಹಾಗೂ ಶಿಸ್ತಿನಿಂದ ಇರುವಂತೆ ನೋಡಿಕೊಳ್ಳಬೇಕು. ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚಿನ ಸೌಲಭ್ಯ ಇಲ್ಲದಿದ್ದಲ್ಲಿ ಎಂಪೆನೆಲ್ ಆಗಿರುವ ಖಾಸಗಿ ಆಸ್ಪತ್ರೆಗೆ ತಕ್ಷಣ ರೋಗಿಯನ್ನು ಕಳುಹಿಸುವ ಮೂಲಕ ಉಚಿತ ಚಿಕಿತ್ಸೆ ಕಲ್ಪಿಸಿ, ಪ್ರಾಣ ಉಳಿಸುವ ಕೆಲಸ ಮಾಡಬೇಕು ಎಂದರು.

ಪಿ.ಎಂ.ಜೆ.ಜೆ.ವೈ ಹಾಗೂ ಪಿ.ಎಂ.ಎಸ್.ಬಿ.ವೈ.ಗೆ ಪ್ರತಿಯೊಬ್ಬರನ್ನು ನೋಂದಣಿ ಮಾಡಿಸುವಂತೆ ತಿಳಿಸಿದರಲ್ಲದೆ, ಅಂಬುಲೆನ್ಸ್ ಸುಸ್ಥಿತಿಯಲ್ಲಿದ್ದು, ಕರ್ತವ್ಯ ನಿರ್ವಹಿಸುತ್ತಿವೆಯೇ ಎಂದು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದರು.

ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳನ್ನು ಎಮ್.ಆರ್.ಐ. ಸ್ಕ್ಯಾನ್ ಮತ್ತು ಸಿಟಿ ಸ್ಕ್ಯಾನ್‌ಗೆ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸಬಾರದು. ಊಟದ ಸಂದರ್ಭದಲ್ಲಿ ಹೊರರೋಗಿಗಳ ಕೌಂಟರ್‌ನಲ್ಲಿ ಒಬ್ಬರು ಸಿಬ್ಬಂದಿಯನ್ನು ಸಾರ್ವಜನಿಕರಿಗೆ ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬ್ಯಾಂಕ್‌ಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಕನ್ನಡದಲ್ಲಿ ಮಾತನಾಡುವ ಮೂಲಕ ಸ್ಪಂದಿಸಿ ಕರ್ತವ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳುವಂತೆ ಲೀಡ್ ಬ್ಯಾಂಕ್ ವ್ಯವಸ್ಥಾಪಕರಿಗೆ ತಿಳಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಉಪ ವಿಭಾಗಾಧಿಕಾರಿ ಶೃತಿ, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

## ಬಾಲ್ಯ ವಿವಾಹಕ್ಕೆ ಕಡಿವಾಣ ಹಾಕಿ

ಬಾಲ್ಯ ವಿವಾಹ, ಬಾಲ ಗರ್ಭಿಣಿಯರು ಹಾಗೂ ಬಾಲ ಕಾರ್ಮಿಕ ಪದ್ಧತಿಯನ್ನುತಡೆಗಟ್ಟುವ ನಿಟ್ಟಿನಲ್ಲಿ ತಹಸೀಲ್ದಾರ್‌ಗಳು ಎಚ್ಚರ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಲಸೆ ಕಾರ್ಮಿಕರ ಪಟ್ಟಿ ತಯಾರಿಸಬೇಕು. ಮಾನವ ಹಕ್ಕು, ಮಕ್ಕಳ ಹಕ್ಕು, ಮಹಿಳೆಯರ ಹಕ್ಕುಗಳು ಉಲ್ಲಂಘನೆಯಾಗದಂತೆ ನಿಗಾವಹಿಸಿ ಹಕ್ಕುಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ವಲಸೆ ಕಾರ್ಮಿಕರ ಮಕ್ಕಳನ್ನು ಗುರುತಿಸಿ ಹತ್ತಿರದ ಸರ್ಕಾರಿ ಶಾಲೆಗಳಿಗೆ ಸೇರಿಸಿ, ಉಚಿತ ಪುಸ್ತಕಗಳ ವಿತರಣೆ, ಬಿಸಿಯೂಟದ ವ್ಯವಸ್ಥೆಗೆ ಕ್ರಮವಹಿಸಬೇಕು. ಹತ್ತಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ತಾತ್ಕಲಿಕವಾಗಿ ಅಂಗನವಾಡಿ ತೆರೆಯುವಂತೆ ಸೂಚಿಸಿದರು.

ವಲಸೆ ಕಾರ್ಮಿಕರಿಗೆ ಇ-ಶ್ರಮ ಕಾರ್ಡ್: ಆಧಾರ್ ಕಾರ್ಡ್ ಇರುವವರು ಹಾಗೂ ಇಲ್ಲದವರನ್ನು ಪಟ್ಟಿ ಮಾಡಿ ಎಪಿಕ್ ಕಾರ್ಡ್ ಹೊಂದಿದ್ದರೆ ಆಧಾರ್ ಕಾರ್ಡ್ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಪ್ರತಿ ತಾಲ್ಲೂಕಿನಲ್ಲೂ ವಲಸೆ ಕಾರ್ಮಿಕರ ಪಟ್ಟಿ ಇರಬೇಕು ಎಂದು ತಹಸೀಲ್ದಾರ್‌ಗಳಿಗೆ ತಿಳಿಸಿದರು.

# ಊಟ ಮಾಡುತ್ತಲೇ ಪ್ರಾಣ ಬಿಟ್ಟ ಯುವಕ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಹೋಟೆಲ್ ಒಂದರಲ್ಲಿ ಸ್ನೇಹಿತರೊಂದಿಗೆ ಊಟ ಮಾಡುತ್ತಿದ್ದಾಗಲೇ ಯುವಕನೊಬ್ಬ ದಿಡೀರ್ ಮೃತಪಟ್ಟಿದ್ದಾನೆ.

ನೇಪಾಳ ಮೂಲದ ಅಂದಾಜು 28 ವರ್ಷದ ಯುವಕ ಮೃತಪಟ್ಟಿದ್ದಾನೆ. ನಗರದ ಬಿಎಂ ರಸ್ತೆಯ ಪ್ರತಿಷ್ಠಿತ ಹೋಟೆಲ್ ಒಂದರಲ್ಲಿ ಯುವಕ ಕೆಲಸ ಮಾಡಿಕೊಂಡಿದ್ದ. ಸ್ನೇಹಿತರೊಂದಿಗೆ ಬಸಟ್ಟಿಕೊಪ್ಪಲಿನ ನಾನ್ ವೆಜ್ ಹೋಟೆಲ್ ಗೆ ಊಟಕ್ಕೆ ಬಂದಿದ್ದ.

ಗೆಳೆಯರೊಂದಿಗೆ ಮಾತನಾಡುತ್ತಾ ಊಟ ಮಾಡುತ್ತಿದ್ದಾಗ ವಾಂತಿಯಾಗಿದೆ. ನಂತರ ಕ್ಷಣಮಾತ್ರದಲ್ಲಿ ಉಸಿರು ನಿಲ್ಲಿಸಿದ್ದಾನೆ.

ಸ್ಥಳಕ್ಕೆ ನಗರ ಠಾಣೆ ಪಿಎಸ್ ಐ ಮೋಹನ್ ಕೃಷ್ಣ ಹಾಗೂ ಸಿಬ್ಬಂದಿ ಬಂದು ಪರಿಶೀಲಿಸಿದರು. ಅಂಬುಲೆನ್ಸ್ ಮೂಲಕ ಮೃತದೇಹವನ್ನು ಹಿಮ್ಸ್ ಗೆ ರವಾನಿಸಲಾಯಿತು.

# ಏಳು ಮಕ್ಕಳ ಸಾವಿಗೆ ಸರ್ಕಾರದ ನಿರ್ಲಕ್ಷ್ಯ ಕಾರಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ರಾಜಸ್ಥಾನದಲ್ಲಿ ಸರ್ಕಾರಿ ಶಾಲಾ ಕಟ್ಟಡ ಕುಸಿದು 7 ಮಕ್ಕಳು ಸಾವನ್ನಪ್ಪಲು ಸರ್ಕಾರದ ನಿರ್ಲಕ್ಷ್ಯವೇ ಕಾರಣವೆಂದು ಎಐಡಿಎಸ್‌ಓ ಆರೋಪಿಸಿದೆ.

ಇದು ನೈಸರ್ಗಿಕ ವಿಕೋಪವಲ್ಲ, ಬದಲಿಗೆ ಸರ್ಕಾರದ ನಿರ್ಲಕ್ಷ್ಯ ಮತ್ತು ಸಾರ್ವಜನಿಕ ಶಿಕ್ಷಣದ ಮೇಲಿನ ಬೇಜವಾಬ್ದಾರಿತನದಿಂದ ಸೃಷ್ಟಿಯಾದ ಮಾನವ ನಿರ್ಮಿತ ದುರಂತವಾಗಿದೆ. ದೇಶಾದ್ಯಂತ ಸಾವಿರಾರು ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ನಿರ್ವಹಣೆ ಕೊರತೆ, ಕಳಪೆ ಮೂಲ ಸೌಕರ್ಯ ಮತ್ತು ತೀವ್ರ ನಿಧಿಯ ಕೊರತೆಯು ಈ ಸಂಸ್ಥೆಗಳನ್ನು ಲಕ್ಷಾಂತರ ವಿದ್ಯಾರ್ಥಿಗಳಿಗೆ ಮರಣ ಸ್ಥಾನಗಳನ್ನಾಗಿ ಮಾಡಿವೆ.

ತನ್ನ ವೈಫಲ್ಯವನ್ನು ಒಪ್ಪಿಕೊಂಡು, ಜವಾಬ್ದಾರಿ ತೆಗೆದುಕೊಳ್ಳುವ ಬದಲು ಕೇಂದ್ರ, ಸರ್ಕಾರವು ಶಾಲೆಗಳಿಗೆ ತುರ್ತು ಪರಿಸ್ಥಿತಿ ಮತ್ತು ನೈಸರ್ಗಿಕ ವಿಕೋಪಗಳಿಗೆ ಸಿದ್ಧರಾಗಿರಿ ಎಂಬ ನಿರ್ದೇಶನ ನೀಡಿ ಈ ದುರಂತದ ಜೀವಹಾನಿಯು ತಪ್ಪಿಸಲಾಗದ ನೈಸರ್ಗಿಕ ಘಟನೆಯಿಂದ ಸಂಭವಿಸಿದೆ ಎಂಬಂತೆ ಬಿಂಬಿಸುತ್ತಿದೆ. ಆಘಾತಕಾರಿಯೆಂದರೆ ಸರ್ಕಾರವು ವಿಕೋಪಗಳು ಸಂಭವಿಸದಂತೆ ನೋಡಿಕೊಳ್ಳುವ ಬದಲು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ದುರಂತಗಳಿಗೆ ಸಿದ್ಧರಾಗಿರಲು ಸೂಚನೆ ನೀಡುತ್ತಿದೆ. ಸಂತ್ರಸ್ತರು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಶಾಲಾ ಅಧಿಕಾರಿಗಳ ಮೇಲೆ ಈ ದೋಷವನ್ನು ವರ್ಗಾಯಿಸುವ ಉದ್ದೇಶಪೂರ್ವಕ ಪ್ರಯತ್ನವು ನಾಚಿಕೆಗೇಡು ಮತ್ತು ಆಕ್ರೋಶಕ್ಕೆ ಕಾರಣವಾಗಿದೆ. ಈ ಬಿಕ್ಕಟ್ಟಿನ ಮೂಲವು ಸರ್ಕಾರಿ ಶಾಲೆಗಳಲ್ಲಿನ ಮೂಲಸೌಕರ್ಯಕ್ಕಾಗಿ ಅನುದಾನದ ತೀವ್ರ ಕೊರತೆಯಲ್ಲಿದೆ. ಶಿಕ್ಷಣವನ್ನು ಖಾಸಗೀಕರಣಗೊಳಿಸುವ ಮತ್ತು ಕಾರ್ಪೊರೇಟೀಕರಣ ಗೊಳಿಸುವ ಗುರಿಯನ್ನು ಹೊಂದಿರುವ 2020 ರಂತಹ ಸಾರ್ವಜನಿಕ ಶಿಕ್ಷಣ ವಿರೋಧಿ ನೀತಿಗಳಿಂದ ಇದು ಇನ್ನಷ್ಟು ಹದಗೆಟ್ಟಿದೆ ಎಂದು ಎಐಡಿಎಸ್‌ಓ ಜಿಲ್ಲಾ ಸಂಚಾಲಕಿ ಚೈತ್ರಾ ಅವರು ಆರೋಪಿಸಿದ್ದಾರೆ.

ರಾಜಸ್ಥಾನ ಶಾಲಾ ಕಟ್ಟಡ ಕುಸಿತದ ಬಗ್ಗೆ ನಿಷ್ಪಕ್ಷಪಾತ ನ್ಯಾಯಾಂಗ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ದೇಶಾದ್ಯಂತ ಎಲ್ಲಾ ಅಸುರಕ್ಷಿತ ಸರ್ಕಾರಿ ಶಾಲಾ ಕಟ್ಟಡಗಳನ್ನು ತುರ್ತಾಗಿ ಪರಿಶೀಲಿಸಿ ದುರಸ್ತಿ ಮಾಡಬೇಕು. ಶಿಕ್ಷಣಕ್ಕಾಗಿ, ವಿಶೇಷವಾಗಿ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಸುಧಾರಿಸಲು ಅನುದಾನವನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಬೇಕು. ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮೇಲೆ ಮಾಡುತ್ತಿರುವ ದೋಷಾರೋಪಣೆ ನಿಲ್ಲಿಸಬೇಕು. ಸರ್ಕಾರ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ನಡೆಸುವ ಎಚ್ಚರಿಕೆಯನ್ನು ಅವರು ನೀಡಿದ್ದಾರೆ.

# ವಿದ್ಯಾರ್ಥಿಗಳ ಕಲಿಕೆಗೆ ಅಡ್ಡಿಯಾದ ಗಾಳಿ-ಮಳೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಅರಕಲಗೂಡು: ತಾಲ್ಲೂಕಿನ ಮಲ್ಲಿಪಟ್ಟಣ ಸರ್ಕಾರಿ ಪ್ರೌಢಶಾಲಾ ಕೊಠಡಿಗಳ ಛಾವಣಿ ಮಳೆ-ಗಾಳಿಗೆ ಹಾರಿಹೋಗಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ಅಡ್ಡಿಯುಂಟು ಮಾಡಿದೆ.

ಕಳೆದ ಶನಿವಾರ, ಭಾನುವಾರ ಸುರಿದ ಮಳೆ ಹಾಗೂ ಭಾರೀ ಪ್ರಮಾಣದಲ್ಲಿ ಬೀಸಿದ ಗಾಳಿಗೆ ಮಳೆ ರಕ್ಷಣೆಗೆಂದು 5 ಕೊಠಡಿಗಳ ಮೇಲೆ ನಿರ್ಮಿಸಲಾಗಿದ್ದ ಕಬ್ಬಿಣದ ಶೀಟ್ ಗಳ ಛಾವಣಿ ಸಂಪೂರ್ಣವಾಗಿ ಹಾರಿಹೋಗಿವೆ. ಛಾವಣಿ ಬಿದ್ದ ರಭಸಕ್ಕೆ ಮರಗಳು ಧರೆಗುರುಳಿವೆ.

ರಾತ್ರಿ ವೇಳೆ ಈ ಅವಘಡ ಸಂಭವಿಸಿರುವ ಹಿನ್ನೆಲೆ ಯಾವುದೇ ಸಮಸ್ಯೆ ಉಂಟಾಗಿಲ್ಲ. ಶಾಲಾ ಅವಧಿಯಲ್ಲಿ ಈ ಘಟನೆ ನಡೆದಿದ್ದರೇ ಸಾವು ನೋವು ಸಂಭವಿಸುತ್ತಿತ್ತು. ಶಾಲಾ ಕಟ್ಟಡ ಹಳೆಯದಾದ ಪರಿಣಾಮ ಪ್ರತಿವರ್ಷ ಮಳೆಗಾಲದಲ್ಲಿ ಸೋರುತ್ತಿತ್ತು. ಅಲ್ಲದೆ ಮಕ್ಕಳು ಸೋರುವ ಕೊಠಡಿಯಲ್ಲಿ ಛತ್ರಿ, ಪ್ಲಾಸ್ಟಿಕ್ ಹಿಡಿದುಕೊಂಡು ಪಾಠ ಕೇಳುವ ಸಂಕಷ್ಟದ ಪರಿಸ್ಥಿತಿ ನಿರ್ಮಾಣವಾಗಿತ್ತು. ಕಬ್ಬಿಣದ ಶೀಟ್‌ನ ಛಾವಣಿಯನ್ನು ಅಳವಡಿಸಿದ್ದ ಹಿನ್ನಲೆ ಮಕ್ಕಳು ಕೊಠಡಿಯಲ್ಲಿ ಕುಳಿತು ಪಾಠ ಕೇಳಲು ಅನುಕೂಲವಾಗಿತ್ತು. ಆದರೆ ಮಳೆ ಗಾಳಿಗೆ ಶೀಟ್ ಹಾರಿ ಹೋಗಿರುವ ಪರಿಣಾಮ ಹಿಂದಿನ ಸಂಕಷ್ಟದ ಪರಿಸ್ಥಿತಿ ಪುನಃ ನಿರ್ಮಾಣವಾಗಿದೆ.

ಮಳೆ ಪ್ರಮಾಣ ಮುಂದುವರಿದಿರುವ ಹಿನ್ನೆಲೆ ಮತ್ತೆ ಛಾವಣಿ ಹಾರಿಹೋಗಿರುವ ಕೊಠಡಿಗಳು ಸೋರುತ್ತಿವೆ. ಶೀಟ್ ಅಳವಡಿಕೆ ಕಾರ್ಯ ಒಂದು ವಾರ ತಡವಾದರೂ ಕೂಡ ಪುನಃ 5 ಕೊಠಡಿಗಳು ಮಳೆ ನೀರಿನಿಂದ ಸೋರಲಾರಂಭಿಸುತ್ತವೆ. ಕೂಡಲೇ ಮೊದಲ ಆದ್ಯತೆ ಮೇರೆಗೆ ಛಾವಣಿ ಅಳವಡಿಕೆ ಕಾರ್ಯ ಆರಂಭಿಸುವಂತೆ ಶಾಲೆಯ ಮುಖ್ಯ ಶಿಕ್ಷಕಿ ಮಮತ ಮನವಿ ಮಾಡಿದರು. ಮಲ್ಲಿಪಟ್ಟಣ ಸರ್ಕಾರಿ ಪ್ರೌಢ ಶಾಲೆಯಲ್ಲಿ ಮಲೆನಾಡು ಭಾಗದ ಮಕ್ಕಳೇ ಅಧಿಕವಾಗಿದ್ದಾರೆ. ಇಲ್ಲಿ ಮಳೆಯ ಪ್ರಮಾಣ ಕೂಡ ಅಧಿಕವಾಗಿರುತ್ತದೆ. ಕೊಠಡಿಗಳು ದುರಸ್ತಿಗೆ ಒಳಗಾದ ಪರಿಣಾಮ ನೀರು ಸೋರುವುದನ್ನು ತಡೆಯುವ ಸಲುವಾಗಿ ಕಬ್ಬಿಣದ ಶೀಟ್ ಗಳ ಛಾವಣಿಯನ್ನು ಅಳವಡಿಸಲಾಗಿತ್ತು. ಛಾವಣಿ ಅಳವಡಿಸುವ ವೇಳೆ ತಾಂತ್ರಿಕತೆ ಅನುಸರಿಸಿದ್ದರೇ ಈ ಅನಾಹುತ ಆಗುತ್ತಿರಲಿಲ್ಲ. ಕ್ಷೇತ್ರದ ಶಾಸಕ ಎ. ಮಂಜು ಅವರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕೆಂದು ಸಮಾಜ ಸೇವಕ ಡಾ. ವಿಶ್ವನಾಥ್, ಶಾಲಾಭಿವೃದ್ಧಿ ಸಮಿತಿ ಸದಸ್ಯ ಕೃಷ್ಣಮೂರ್ತಿ ಒತ್ತಾಯಿಸಿದರು.

## ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂತೆ ಒತ್ತಾಯ

ಆಲೂರು: ಸೆಸ್ಕ್ ಸಿಬ್ಬಂದಿ ನಿರ್ಲಕ್ಷ್ಯದಿಂದ ಗ್ರಾಮಗಳು ಕಗ್ಗತ್ತಲಲ್ಲಿ ಮುಳುಗಿದ್ದು ಕರ್ತವ್ಯ ಲೋಪ ಎಸಗುವವರನ್ನು ಕೂಡಲೇ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿ ಮಗ್ಗೆ ಗ್ರಾಮಸ್ಥರು ಸೆಸ್ಕ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಮಗ್ಗೆ ಹಾಗೂ ಸುತ್ತಲಿನ ಭಾಗದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಮಗ್ಗೆ ಹಾಗೂ ಕೆ. ಹೊಸಕೋಟೆ ಹೋಬಳಿ ವ್ಯಾಪ್ತಿಯಲ್ಲಿ ಹಲವು ದಿನಗಳಿಂದ ವಿದ್ಯುತ್ ಕಣ್ಣಾ ಮುಚ್ಚಾಲೆ ಮುಂದುವರಿದಿದೆ. ಇಲ್ಲಿ ಕಾರ್ಯನಿರ್ವಹಿಸುವ ಸೆಸ್ಕ್ ಸಿಬ್ಬಂದಿ ಜನಸಾಮಾನ್ಯರಿಗೆ ಸರಿಯಾಗಿ ಸ್ಪಂದಿಸದೆ ಉಡಾಫೆಯಿಂದ ವರ್ತಿಸುತ್ತಿದ್ದಾರೆ. ಕರ್ತವ್ಯ ಪ್ರಜ್ಞೆ ಮರೆತ ಸಿಬ್ಬಂದಿಯನ್ನು ತಕ್ಷಣ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದರು.

ಗ್ರಾಮದ ಕಾಳಿಂಗ ಮಾತನಾಡಿ, ಕೆಲವು ಅಧಿಕಾರಿಗಳ ಬೇಜವಾಬ್ದಾರಿತನದಿಂದ ಭಾಗದಲ್ಲಿ ಹಲವು ದಿನಗಳಿಂದ ವಿದ್ಯುತ್ ಸಮಸ್ಯೆ ಹೆಚ್ಚಿದೆ. ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಿದೆ. ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗಿದೆ. ಈ ಬಗ್ಗೆ ಹಲವು ತಿಂಗಳಿನಿಂದ ಸೆಸ್ಕಾಂ ಅಧಿಕಾರಿಗಳಿಗೆ ತಿಳಿಸುತ್ತಿದ್ದರೂ ಯಾವ ಪ್ರಯೋಜನವಾಗಿಲ್ಲ. ಭಾಗದಲ್ಲಿ ಕಾಡಾನೆಗಳ ಉಪಟಳ ಹೆಚ್ಚಿದೆ. ದಿನದ 24 ಗಂಟೆಯೂ ವಿದ್ಯುತ್ ಸರಬರಾಜು ಮಾಡಬೇಕೆನ್ನುವ ನಿಯಮವಿದ್ದರೂ ಅಧಿಕಾರಿಗಳು ತಾತ್ಸಾರ ತೋರುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೆ.ಎನ್. ಕಾಂತರಾಜ್ ಮಾತನಾಡಿ, ಮಗ್ಗೆ ಹಾಗೂ ಕೆ. ಹೊಸಕೋಟೆ ಭಾಗದಲ್ಲಿ ಕಾಡಾನೆಗಳ ಉಪಟಳ ಮಿತಿಮೀರಿದೆ. ದಿನದ 24 ಗಂಟೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಸಕಲೇಶಪುರ ವಿಭಾಗ ಸೆಸ್ಕ್ ಕಾರ್ಯಪಾಲಕ ಅಭಿಯಂತರ ಜಿ.ಎಂ. ಅರ್ಜುನ್ ಹಾಗೂ ಆಲೂರು ವಿಭಾಗ ಸಹಾಯಕ ಕಾರ್ಯಪಾಲಕ ರಂಗೇಗೌಡ ಅವರು ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಾಕಾರರ ಮನವೊಲಿಸಿ, ವಿದ್ಯುತ್ ಸಮಸ್ಯೆ ಹಾಗು ಕರ್ತವ್ಯ ಲೋಪ ಎಸಗುವ ಅಧಿಕಾರಿಗಳ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಭರವಸೆ ನೀಡಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೆ.ಎನ್. ಕಾಂತರಾಜು, ಬಿಜೆಪಿ ಮುಖಂಡ ಚಂದ್ರಶೇಖರ್ ಕಾಗನೂರು, ರೈತ ಸಂಘ ಮುಖಂಡ ಹೈದೂರು ಜಯಣ್ಣ ಮತ್ತಿತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಜುಲೈ-30

**2007:** ಭಾರತದ ಮೊದಲ ಮಹಿಳಾ ರಾಷ್ಟ್ರಪತಿ ಪ್ರತಿಭಾ ಪಾಟಿಲ್ ಅವರ ಪ್ರಮಾಣ ವಚನದ ನಂತರ ಹಮಿದ್ ಅನ್ಸಾರಿ ಉಪರಾಷ್ಟ್ರಪತಿಯಾಗಿ ಆಯ್ಕೆಯಾದರು.

**2015:** ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಅಂತ್ಯಕ್ರಿಯೆ ತಮಿಳುನಾಡಿನ ರಾಮೇಶ್ವರದಲ್ಲಿ ಜರುಗಿತು.

**2015:** 1993ರ ಮುಂಬೈ ಬಾಂಬ್ ಸ್ಫೋಟ ಪ್ರಕರಣದಲ್ಲಿ ಅಪರಾಧಿಯಾಗಿದ್ದ ಯಾಕೂಬ್ ಮೆಮನ್ ಅನ್ನು ನರಸಿಂಹ್ ಜೈಲಿನಲ್ಲಿ ನೇಣಿಗೆ ಹಾಕಲಾಯಿತು. ಇದು ಅತ್ಯಂತ ಚರ್ಚಿತ ಹಾಗೂ ವಿವಾದಾತ್ಮಕ ಘಟನೆಯಾಯಿತು.

ಜನನ

**1863:** ಹೆನ್ರಿ ಫೋರ್ಡ್, ಪ್ರಸಿದ್ಧ ಅಮೇರಿಕನ್ ಉದ್ಯಮಿಯು ಜನಿಸಿದರು. ಭಾರತದ ನೇರ ಸಂಬಂಧವಿಲ್ಲದಿದ್ದರೂ ಸಹ ಅವರ ಕೊಡುಗೆ ಜಾಗತಿಕ ಕೈಗಾರಿಕಾ ಕ್ರಾಂತಿಯಲ್ಲಿ ಮಹತ್ವದ್ದಾಗಿದೆ.

ಮರಣ

**2012:** ರಾಜೇಶ್ ಖನ್ನಾ, ಬಾಲಿವುಡ್‌ನ ಮೊದಲ ಸೂಪರ್ ಸ್ಟಾರ್ ಎಂದು ಕರೆಸಿಕೊಂಡ ನಟ.

# ರಂಗ ಯಾವುದಿರಲಿ ಭಂಗವೇನೇ ಬರಲಿ ಸ್ತ್ರೀ ಶಕ್ತಿಗೆ ಸಾಟಿಯಿಲ್ಲ



- ಎಂ.ಕೆ. ಲತಾಮಣಿ, ತುರುವೇಕೆರೆ

ಧರ್ಮ ಅಧರ್ಮಗಳನ್ನು ಲೆಕ್ಕಿಸಿಯೋ, ಲೆಕ್ಕಿಸದೆಯೋ ತನಗಾಗಿ, ತನ್ನವರಿಗಾಗಿ, ತನ್ನತನಕ್ಕಾಗಿ, ತನ್ನದಕ್ಕಾಗಿ, ನಡೆಸಿದ ಹೋರಾಟವೇ ಯುದ್ಧ ಎಂದು ವ್ಯಾಖ್ಯಾನಿಸಬಹುದಾದ ಈ ಯುದ್ಧವು ಆದಿಕಾಲದಲ್ಲಿ ಹೊಟ್ಟೆಪಾಡಿಗಾಗಿ ಮಾನವ ಮತ್ತು ಪ್ರಾಣಿಗಳ ನಡುವೆ ಆರಂಭವಾಯಿತು. ನಂತರದಲ್ಲಿ ಮಾನವ ಮಾನವರ ನಡುವೆಯೇ ಶುರುವಾಯಿತು. ಎಂದಿನಿಂದ ಮಾನವ ಮಾನವರ ನಡುವೆಯೇ ಈ ಹೋರಾಟವೆಂಬುದು ಪ್ರಾರಂಭವಾಯಿತೋ, ಅಂದಿನಿಂದ ಇಂದಿನವರೆಗೂ ಆ ಹೋರಾಟವು ನಿರಂತರವಾಗಿ ಮುಂದುವರೆಯುತ್ತಲೇ ಇದೆ.

ಕುಟುಂಬಗಳಲ್ಲಿ ಆಸ್ತಿಗಾಗಿ, ಮನೆ ಮನೆಗಳಲ್ಲಿ ಮರ್ಯಾದೆಗಾಗಿ, ಊರು ಊರುಗಳಲ್ಲಿ ಗೌಡಿಕೆಗಾಗಿ, ನಾಡು ನಾಡುಗಳಲ್ಲಿ ಅಧಿಕಾರಕ್ಕಾಗಿ, ದೇಶ ದೇಶಗಳಲ್ಲಿ ಅಭಿಮಾನಕ್ಕಾಗಿ, ನಡೆಯುತ್ತಿರುವ ಹೋರಾಟಗಳು ಇಂದು ವಿಶ್ವದೊಳಗಣ ರಾಷ್ಟ್ರ ಅಂತರರಾಷ್ಟ್ರಗಳ ನಡುವೆ ಯುದ್ಧದ ರೂಪ ತಾಳಿವೆ. ಇಂತಹ ಯುದ್ಧಗಳು ಜಾತಿಯತೆ, ಲಿಂಗ ಸಮಾನತೆ, ಧರ್ಮನಿಷ್ಠತೆ, ಬೇಡಿಕೆಗಳ ಪೂರೈಕೆ, ವರ್ಣಗಳ ಪರಿಪಾಲನೆ, ದುರಾಲೋಚನೆ, ದುರಾಸೆಗಳಂತಹ ಮೌಢ್ಯಾಚರಣೆಯಾಗಿರುವುದು ನಿಜಕ್ಕೂ ವಿಷಾದನೀಯವಾಗಿದೆ.

ಸಹನೆಯ ಸಾಕಾರ ಮೂರ್ತಿ ಸ್ತ್ರೀ, ಪೌರುಷದ ಸಂಕೇತ ಪುರುಷ ಎಂಬ ತಾರತಮ್ಯವಿಲ್ಲದೆ ಎಲ್ಲರೂ ಈ ಯುದ್ಧಗಳನ್ನು ಸಾರಿ, ಭಾಗಿಯಾಗಿ ಹೋರಾಟ ನಡೆಸಿದ್ದಾರೆ. ಕೆಲವರು ಗೆಲುವನ್ನು ಕಂಡರೆ ಕೆಲವರು ಸೋಲನ್ನುಂಡಿದ್ದಾರೆ, ಇನ್ನೂ ಕೆಲವರು ವೀರ ಮರಣವನ್ನಪ್ಪಿದರೆ ಮತ್ತೂ ಕೆಲವರು ಪಲಾಯನಗೈದಿದ್ದು ಉಂಟು, ರಾಜಿ ಸಂಧಾನವಾದದ್ದು ಉಂಟು.

ಪ್ರಿಯ ಓದುಗರೆ ನಾನೂ ಓರ್ವ ಸ್ತ್ರೀಯಾದ್ದರಿಂದ ಈ ರಣರಂಗದಲ್ಲಿ ಸ್ತ್ರೀ ಸೇನಾ ಶಕ್ತಿ ಹೇಗಿತ್ತು? ಹೇಗಿದೆ? ಎಂಬ ಕುತೂಹಲದಿಂದ ಮಾಹಿತಿ ಕಲೆಹಾಕ ಹೊರಟಾಗ ದೊರೆತ ರೋಚಕ ಘಟನೆಗಳನ್ನು ಮತ್ತು ವೀರ ವನಿತೆಯರ ಯಶೋಗಾಥೆಯನ್ನು ತಿಳಿದು ಸ್ತ್ರೀಯಾಗಿರುವುದಕ್ಕೆ ಹೆಮ್ಮೆಯೆನಿಸಿತು. ಆದ್ದರಿಂದ ಅವುಗಳನ್ನು ನಿಮ್ಮೊಂದಿಗೆ ಈ ಲೇಖನದ ಮೂಲಕ ಹಂಚಿಕೊಳ್ಳಲು ಬಯಸುತ್ತೇನೆ.

ಆದಿಮಾನವನ ಕಾಲ ಅಂತ್ಯವಾಗಿ ನಾಗರೀಕತೆಗಳು ಬೆಳೆದಾಗ ನಾಯಕರು, ಪಾಳೇಗಾರರು, ರಾಜ ಮನೆತನಗಳ ಕಾಲ ಪ್ರಾರಂಭವಾಗುತ್ತದೆ. ಅಂದಿನ ರಾಜಮನೆತನದಲ್ಲಿ ಕೇವಲ ರಾಜರು ಯುದ್ಧಗಳಲ್ಲಿ ತೊಡಗಿಸಿಕೊಳ್ಳುವುದಲ್ಲದೆ ರಾಣಿಯರೂ ಸಹ ಯುದ್ಧಗಳಲ್ಲಿ ಭಾಗಿಯಾಗಿ ಧೈರ್ಯದಿಂದ ಹೋರಾಡಿದ ನಿದರ್ಶನಗಳು ನಮ್ಮ ನೆಲದಲ್ಲಿಯೇ ಇವೆ.

ಈ ಭವ್ಯ ಭಾರತದ ನೆಲದಲ್ಲಿ ವೀರ ಮಹಿಳೆಯರಾಗಿ ಇಂದಿಗೂ ಅಜರಾಮರವಾದ ಸ್ತ್ರೀ ರತ್ನಗಳೆಂದರೆ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ಅಹಲ್ಯಾಬಾಯಿ ಹೋಳ್ಕರ್, ಸರೋಜಿನಿ ನಾಯ್ಡು, ಕಸ್ತೂರಬಾ, ಅರುಣ ಅಸಫ್ ಅಲಿ, ಬೇಗಂ ಹಜರತ್ ಮಹಲ್, ಅನ್ನ ಚಾಂಡಿ, ಭಿಕೈಜಿ ಕ್ಯಾಮ, ಇಂದಿರಾಗಾಂಧಿ, ಸುಭದ್ರಕುಮಾರಿ ಚೌಹಾಣ್, ರಾಣಿ ಕಮಲಾದೇವಿ ಚಟ್ಟೋಪಾಧ್ಯಾಯ, ಕಮಲಾ ನೆಹರು, ಫಾತಿಮಾ ಶೇಖ್ ವಿಜಯಲಕ್ಷ್ಮಿ ಪಂಡಿತ್, ರಾಣಿ ವೇಲುನಾಚಿಯಾರ್, ಅನ್ನಿಬೆಸೆಂಟ್, ಪ್ರೀತಿಲತಾ ವಡ್ಡೆದಾರ್, ಸುಚೇತ ಕೃಪಲಾನಿ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುವುದನ್ನು ಗಮನಿಸಿದ ನಮಗೆ ನಿಜಕ್ಕೂ ಮೈ ಜುಮ್.... ಎನಿಸುವುದು. ಅಬ್ಬಾ! ಇಷ್ಟೊಂದು ಸ್ತ್ರೀಯರು ಅಂದೇ ಯುದ್ಧ ಭೂಮಿಗಿಳಿದು ಹೋರಾಟ ಮಾಡುತ್ತಿದ್ದರೇ..? ಎಂದು ಆಶ್ಚರ್ಯವೂ ಆಗುವುದು.

ಸ್ತ್ರೀ ಎಂದರೆ ಆಚಾರ, ವಿಚಾರ, ಗೊಡ್ಡು ಸಂಪ್ರದಾಯ, ಮೌಢ್ಯ ಎಂಬ ನಾಲ್ಕು ಗೋಡೆಗಳ ಚೌಕಟ್ಟಿನಲ್ಲಿ ಬಂಧಿಯಾಗಿದ್ದು ಸ್ವತಂತ್ರ, ಸ್ವಂತಿಕೆ, ಅವಕಾಶಗಳಿಂದ ವಂಚಿತಳಾದವಳು ಎಂದು ಗುರುತಿಸಿಕೊಂಡಿದ್ದ ಆ ಕಾಲದಲ್ಲಿಯೇ ಸ್ತ್ರೀ ಶಕ್ತಿ ಎಂಥಾದೆಂದು ತೋರಿಸಿಕೊಟ್ಟ ಈ ಧೀರೆ ನೀರೆಯರು ತಮ್ಮ ಸಮಕಾಲೀನ



ರಾಜರೊಂದಿಗೆ ಯುದ್ಧ ಮಾಡಿ, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ಭಾರತದ ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡಿ ವೀರತ್ವವನ್ನು ಮೆರೆದಿದ್ದಾರೆ.

ಸ್ವಾತಂತ್ರ್ಯ ನಂತರದಲ್ಲಿ ನೋಡುವುದಾದರೆ ಧಕ್ಷೆ ಹಾಗೂ ಪ್ರಾಮಾಣಿಕ ಆಡಳಿತಗಾರ್ತಿಯಾಗಿ ಗುರುತಿಸಿಕೊಂಡ ಮಹಿಳಾ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರೂ ಕೂಡ 1971ರ ಭಾರತ - ಪಾಕಿಸ್ತಾನ ಯುದ್ಧದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಚಾಕಚಕ್ಯತೆಯಿಂದ ಪಾಕಿಸ್ತಾನವನ್ನು ಸೋಲಿಸಿ ಬಾಂಗ್ಲಾದೇಶವನ್ನು ಸ್ವತಂತ್ರ ರಾಷ್ಟ್ರವಾಗಿಸುವಲ್ಲಿ ಸಹಕಾರಿಯಾಗಿದ್ದರು. 1975ರಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದರು. ಗರೀಬಿ ಹಟಾವೋ ಎಂಬ ಘೋಷ ವಾಕ್ಯದೊಂದಿಗೆ ಬಡತನ ನಿರ್ಮೂಲನೆಗಾಗಿ ಶ್ರಮಿಸಿದ್ದರು. ಅಣುಶಕ್ತಿ ಕಾರ್ಯಕ್ರಮ, ಕೃಷಿ ವಲಯದ ಪ್ರಗತಿ, ರಾಷ್ಟ್ರೀಯ ಭದ್ರತೆಗಳಂತಹ ಮಹತ್ತರ ಯೋಜನೆಗಳನ್ನು ಸಾಧಿಸಿ ಸ್ತ್ರೀಶಕ್ತಿಯಾಗಿ ನಿಂತವರಲ್ಲಿ ಇಂದಿರಾ ಗಾಂಧಿಯವರೂ ಒಬ್ಬರು.

ಪ್ರಸ್ತುತದಲ್ಲಿ ನೋಡುವುದಾದರೆ ಕಾನೂನು ರೀತ್ಯವಾಗಿ ಮೀಸಲಾತಿ ಪಡೆದು ಪುರುಷರಿಗಿಂತ ಮಹಿಳೆಯರು ಯಾವುದರಲ್ಲೂ ಕಡಿಮೆ ಇಲ್ಲ, ಅಸಮರ್ಥರಲ್ಲ, ಅಸಮಾನರಲ್ಲ, ಎಂಬುದನ್ನು ಸಾಬೀತು ಪಡಿಸಲು ಎಲ್ಲಾ ಕಾರ್ಯಕ್ಷೇತ್ರಗಳಲ್ಲೂ, ವೃತ್ತಿರಂಗದಲ್ಲೂ ತನ್ನನ್ನು ತಾನು ತೊಡಗಿಸಿಕೊಂಡಿರುವ ಟಿಸ್ತ್ರೀಟಿ ಸೇನೆಯಲ್ಲೂ ಸಹ ಸಹಭಾಗಿತ್ವವನ್ನು ಹೊಂದಿದ್ದಾಳೆ.

ಭಾರತ ದೇಶ ಎಂದಿಗೂ ಮರೆಯದ ಪ್ರಮುಖವಾದ ಯುದ್ಧಗಳಲ್ಲೊಂದೆಂದರೆ ಅದು ಕಾರ್ಗಿಲ್ ಯುದ್ಧ. ಈ ಕಾರ್ಗಿಲ್ ಯುದ್ಧದಲ್ಲಿ ಸ್ತ್ರೀಯರು ತನ್ನ ಶಕ್ತಿಯನ್ನು ನೇರವಾಗಿ ಯುದ್ಧ ಭೂಮಿಯಲ್ಲಿ ಪ್ರದರ್ಶಿಸಲು ಅವಕಾಶ ದೊರೆಯಲಿಲ್ಲ, ಆದರೂ ಮಿಡಿವ ಮಹಿಳೆಯ ಮನದ ಮಿಡಿತವು ದೇಶಕ್ಕಾಗಿ ಮಿಡಿಯಿತು, ಆದ್ದರಿಂದ ಯುದ್ಧದ ಪರಿಣಾಮಗಳನ್ನು ನಿಭಾಯಿಸಲು, ಸೈನಿಕರಿಗೆ ಬೆಂಬಲ ನೀಡಲು, ಸಮುದಾಯಗಳನ್ನು ಪುನರ್ನಿರ್ಮಿಸಲು ಪ್ರಮುಖ ಕೊಡುಗೆಗಳನ್ನು ನೀಡಿದರು. ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಸೈನಿಕರ ತ್ಯಾಗ ಮತ್ತು ಧೈರ್ಯ ಮಹಿಳೆಯರಿಗೆ ಈ ಸ್ಫೂರ್ತಿ ನೀಡಿ ಸಮಾಜದಲ್ಲಿ ಅವರ ಪಾತ್ರವನ್ನು ಬಲಪಡಿಸುವಲ್ಲಿ ಪ್ರೇರೇಪಿಸಿತು. ಇದರಿಂದ ಪ್ರೇರೇಪಿತರಾದ ಮಹಿಳೆಯರು ಸೇನೆಯಲ್ಲೂ ಸ್ತ್ರೀಶಕ್ತಿಯನ್ನು ತೋರಲು ಮುಂದಾದರು, ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರ ಯೋಧರ ಮಡದಿಯರು ಮತ್ತು ಕುಟುಂಬದ ಸ್ತ್ರೀಯರು ವೀರ ನಾರಿ ಎಂದು ಗುರುತಿಸಲ್ಪಟ್ಟರು. ಯುದ್ಧದಲ್ಲಿ ಗಾಯಗೊಂಡ ಯೋಧರಿಗೆ, ಸೈನಿಕರಿಗೆ ಸೂಕ್ತ ಚಿಕಿತ್ಸೆ ನೀಡಲು, ಆರೈಕೆ ಮಾಡಲು ವೈದ್ಯರು, ದಾದಿಯರು ಇತರೆ ವೈದ್ಯಕೀಯ ಸಿಬ್ಬಂದಿಗಳ ಹುದ್ದೆಗೆ ಸ್ತ್ರೀಯರು ಭಾಜನರಾದರು. ಯುದ್ಧದ ಸಮಯದಲ್ಲಿ ಸೈನ್ಯದ ಕಾರ್ಯಾಚರಣೆಗಳನ್ನು ಬೆಂಬಲಿಸಲು, ಆಡಳಿತಾತ್ಮಕ ಮತ್ತು ಬೆಂಬಲ ಸೇವೆಗಳನ್ನು ಒದಗಿಸಲು ಮಹಿಳೆಯರು ನೆರವಾದರು. ಸಾಮಾಜಿಕ ಬೆಂಬಲ ನೀಡಲು ಬೆನ್ನೆಲುಬಾಗಿ ಮಹಿಳಾ ಅಧಿಕಾರಿಗಳಾಗಿ ಹಾಗೂ ಸಾರಿಗೆ ವ್ಯವಸ್ಥೆಯಲ್ಲೂ ಮಹಿಳೆಯರು ಮಹತ್ತರ ಪಾತ್ರ ವಹಿಸಿದರು.

1999 ರಲ್ಲಿ ನಡೆದ ಕಾರ್ಗಿಲ್ ಯುದ್ಧದ ಸಮಯದಲ್ಲಿ ಮಹಿಳಾ ಅಧಿಕಾರಿಯಾಗಿದ್ದ ಕ್ಯಾಪ್ಟನ್ ಯಾಷಿಕ ಹತ್ವಾಲ್ ತ್ಯಾಗಿಯವರು ಗರ್ಭಿಣಿಯಾಗಿದ್ದರೂ ಕೂಡ ಲಡಾಖ್ ನ ಲೇಹ್ ನಲ್ಲಿ ಸೇವೆ ಸಲ್ಲಿಸುವ ಮೂಲಕ ದೇಶಕ್ಕಾಗಿ ಅಚಲ ಸೇವೆಯನ್ನು ಸಮರ್ಪಿಸಿದರು.

ಬಿರು ಬಿಸಿಲಿನ ಬೇಸಿಗೆಯ ಬೇಗೆಯಲ್ಲಿ ಲಡಾಖ್ ನ ಎತ್ತರದ ಭೂಮಿಯ ಒಂದು ಗಡಿಯಲ್ಲಿ ನಡೆಯುತ್ತಿದ್ದ ಕಾರ್ಗಿಲ್ ಯುದ್ಧದಲ್ಲಿ ತನ್ನ ದೇಶವನ್ನು ರಕ್ಷಿಸುವ ಹೊಣೆ ಒಂದು ಕಡೆಯಾದರೆ, ತನ್ನ ಗರ್ಭಗುಡಿಯಲ್ಲಿರುವ ಮಗುವಿಗೆ ಏನೂ ಆಗದಂತೆ ರಕ್ಷಿಸಿಕೊಳ್ಳುವ ಹೊಣೆಯೂ ಕೂಡ ಕ್ಯಾಪ್ಟನ್ ಆಗಿದ್ದ ಯಾಷಿಕಾ ಹತ್ವಾಲ್ ತ್ಯಾಗಿಯವರದ್ದಾಗಿತ್ತು. ಲಿಂಗ ತಾರತಮ್ಯದ ಅಡೆತಡೆಗಳನ್ನು ಮುರಿದು, ಧೈರ್ಯಕ್ಕೆ ಇನ್ನೊಂದು ಹೆಸರೇ ನಾನು ಎಂದು ಮನಗಂಡು ಆತ್ಮ ವಿಶ್ವಾಸದಿಂದ ಸದೃಢ ಸೈನಿಕನಂತೆ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಈ ವೀರ ಮಹಿಳೆಯ ದೇಶಭಕ್ತಿಯು ನಮ್ಮಂಥ ಸ್ತ್ರೀಯರಿಗೆ ಮಾದರಿಯಾಗಬೇಕು.

ಸೇನಾ ಕರ್ನಲ್ ರವರ ಮಗಳಾಗಿದ್ದ ಯಾಷಿಕ, ಯುದ್ಧ ಭೂಮಿಯಲ್ಲಿ ತನ್ನ ತಂದೆ ವೀರಮರಣವನ್ನಪ್ಪಿದ ಘಟನೆಯಿಂದ ಪ್ರೇರೇಪಿತರಾಗಿ ತಾನು ಕೂಡ ಸೇನೆಗೆ ಸೇರಲು ಬಯಸಿದ್ದರು. ಆದರೆ ಆಗ ಮಹಿಳೆಯರಿಗೆ ಅವಕಾಶವಿರಲಿಲ್ಲ. 1992ರ ವೇಳೆಗೆ ಯುದ್ಧೇತರ ಪಾತ್ರಗಳಿಗೆ ಸೇನೆಯಲ್ಲಿ ಮಹಿಳೆಯರಿಗೆ ಅವಕಾಶಗಳು




ದೊರೆತವು. ಆಗ ಯಾಶಿಕಾರವರು ಅಧಿಕಾರಿಗಳ ತರಬೇತಿ ಅಕಾಡೆಮಿಗೆ ಸೇರಿದರು. 1995 ರಲ್ಲಿ ಸೇನಾ ಅಧಿಕಾರಿಯನ್ನು ವಿವಾಹವಾದರು. 1996ರಲ್ಲಿ ಮೊದಲ ಮಹಿಳಾ ಲಾಜಿಸ್ಟಿಕ್ಸ್ ಅಧಿಕಾರಿಯಾದರು. ನಂತರ 1999 ರಲ್ಲಿ ಲೇಹನಲ್ಲಿ ಕ್ಯಾಪ್ಟನ್ ಆಗಿ ನೇಮಕಗೊಂಡ ಯಾಶಿಕಾರವರು ಎರಡು ತಿಂಗಳ ಗರ್ಭಿಣಿಯಾಗಿದ್ದರೂ ಕೂಡ ಕರ್ತವ್ಯ ನಿರ್ವಹಿಸುತ್ತಿದ್ದರು. ಅದೇ ವೇಳೆಗೆ ಕಾರ್ಗಿಲ್ ಯುದ್ಧ ಸಂಭವಿಸಿತು ಎಲ್ಲಿಯೂ ಧೃತಿಗೆಡದೆ ಲಾಜಿಸ್ಟಿಕ್ಸ್ ಆಗಿ ತಮ್ಮ ಕೆಲಸದ ಮೂಲಕ ಯುದ್ಧಕ್ಕೆ ಬೆಂಬಲ ನೀಡಿ, ಶಕ್ತಿ ಮೀರಿದ ಪ್ರಯತ್ನ ಹಾಗೂ ತನಗೆ ಮೀರಿದ ಶಕ್ತಿಯನ್ನು ಪ್ರದರ್ಶಿಸಿದರು. ಸೇನಾ ವೃತ್ತಿಯಿಂದ ನಿವೃತ್ತಿಯಾದ ಬಳಿಕವೂ ರಕ್ಷಣಾ ಸಚಿವಾಲಯದ ಯೋಜನೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಕಾರ್ಗಿಲ್ ವಿಜಯದ ದಿನವಾದ ಇಂದು ಯಾಶಿಕಾ ಹತ್ವಾಲ್ ತ್ಯಾಗಿಯವರನ್ನು ನೆನೆಯುವುದು ನಿಜಕ್ಕೂ ಅತ್ಯವಶ್ಯವೇ ಸರಿ.

ಇತ್ತೀಚಿನ ದಿನಗಳಲ್ಲಿ ನಡೆದ ಆಪರೇಷನ್ ಸಿಂದೂರ ಯುದ್ಧದ ಸಂದರ್ಭದಲ್ಲಿ ರಾಷ್ಟ್ರವನ್ನುದ್ದೇಶಿಸಿ ಭಾರತೀಯ ಸೇನೆಯ ಪರವಾಗಿ ಮಾತನಾಡಿದ ಕರ್ನಲ್ ಸೋಫಿಯಾ ಖುರೇಷಿ ರವರು ಕೂಡ ಓರ್ವ ದಕ್ಷೆ, ಮಹಿಳಾ ಸೇನಾಧಿಕಾರಿ. ಭಾರತೀಯ ಸೇನೆಯ ನಿರ್ಣಾಯಕ ಕಾರ್ಪ್ಸ್ ಆಫ್ ಸಿಗ್ನಲ್ ನಲ್ಲಿ ಅಧಿಕಾರಿಯಾಗಿರುವ ಲೆಫ್ಟಿನೆಂಟ್ ಕರ್ನಲ್ ಸೋಫಿಯಾ ಖುರೇಷಿ ಅವರು ಕಾಂಗೋದಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯ ಭಾಗವಾಗಿ ನಿಯೋಜಿಸಲ್ಪಟ್ಟಿದ್ದರು. ಕದನ ವಿರಾಮಗಳನ್ನು ಮೇಲ್ವಿಚಾರಣೆ ಮಾಡುವ ಮತ್ತು ಸಂಘರ್ಷ ವಲಯಗಳಲ್ಲಿ ಮಾನವೀಯ ಪ್ರಯತ್ನಗಳಿಗೆ ಸಹಾಯ ಮಾಡುವ ಜವಾಬ್ದಾರಿಯನ್ನು ಹೊಂದಿದ್ದರು. ಎಕ್ಸ್ ಸೈಜ್ ಫೋರ್ಸ್ 18 ರಲ್ಲಿ ಭಾರತೀಯ ಸೇನಾ ತುಕಡಿಯನ್ನು ಮುನ್ನಡೆಸಿದ ಮೊದಲ ಮಹಿಳೆ ಎನ್ನುವ ಕೀರ್ತಿ ಇವರದ್ದು. ಆಪರೇಷನ್ ಸಿಂಧೂರ್ ನಲ್ಲಿ ಪಾಕಿಸ್ತಾನ ಎಸಗಿದ ಬಹು ಕದನ ವಿರಾಮ ಉಲ್ಲಂಘನೆ, ಡ್ರೋನ್ ದಾಳಿ, ಸಾಂಬಾ ವಲಯದಿಂದ ಒಳನುಸುಳುವಿಕೆಯ ಪ್ರಯತ್ನವನ್ನು ವಿಫಲಗೊಳಿಸಿ, ವಾಯುದಾಳಿ ಸೈರನ್ ಗಳನ್ನು ಮೊಳಗಿಸಿ, ಹೆಚ್ಚಿನ ಸಿದ್ಧತೆಗಾಗಿ ಪ್ರಮುಖ ಸಿಬ್ಬಂದಿಗೆ ಕರ್ಫ್ಯೂ, ಬ್ಲ್ಯಾಕ್ ಔಟ್ ಮತ್ತು ರಜೆ ರದ್ದತಿಗಳನ್ನು ವಿಧಿಸುವ ಹಾಗೂ ಅಸ್ಥಿರವಾದ ಪರಿಸ್ಥಿತಿಯಿಂದ ನಾಗರಿಕ ಜೀವನದ ಮೇಲೆ ಬೀರಬಹುದಾದಾ ಗಮನಾರ್ಹ ಪರಿಣಾಮಗಳನ್ನು ಮನಗಂಡು ಚಾಕಚಕ್ಯತೆಯಿಂದ ಜವಾಬ್ದಾರಿಯನ್ನು ನಿರ್ವಹಿಸಿದ ಸೋಫಿಯಾ ಖುರೇಷಿಯವರೂ ಕೂಡ ಸ್ತ್ರೀ ಶಕ್ತಿಗೆ ಮಾದರಿಯಾಗಿ ನಿಲ್ಲುತ್ತಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248